ವಿ. ಹಮೀದ್, ವಿಟ್ಲ
*ಸಂತಾನ ಇಲ್ಲದವರಿಗೆ ಧನದ ಮೋಹ ಜಾಸ್ತಿ. ಏಕೆ?*



ಪಟನಿಯಮ! ಸೂತ್ರವಿಲ್ಲದ ಗಾಳಿಪಟಕ್ಕೆ ಆಕಾಶವನ್ನೇ ಆಕ್ರಮಿಸುವ ಆಸೆ!

ಆರ್. ಮಧುಸೂದನ, ಹಾಸನ
*ನರಿ ಮುಖ ನೋಡಿದರೆ ಶುಭ ಅಂತಾರೆ. ನರಿ ಬುದ್ಧಿ ಮಾತ್ರ ಬೇಡ ಅಂತಾರಲ್ಲ, ಯಾಕೆ?*
ತಮ್ಮಲ್ಲೇ ಸಿಕ್ಕಾಪಟ್ಟೆ ಇರುವುದನ್ನು ಬೇಡ ಅನ್ನೋದು ಸಹಜ ಅಲ್ಲವೇ!

ಎಂ.ಜಿ. ರಾಜಶೇಖರ್ ಶೆಟ್ಟಿ, ದೊಡ್ಡಬಳ್ಳಾಪುರ
*ತಿರುಪತಿ ತಿಮ್ಮಪ್ಪನ ಮೈಮೇಲೆ ಹೇರಿದಂತೆ ಗೊಮ್ಮಟೇಶ್ವರನ ಮೇಲೆ ಹೇರಲು ಎಷ್ಟು ಚಿನ್ನ, ವಜ್ರ ಬೇಕಾಗುತ್ತದೆ?*
ಎಷ್ಟು ಬೇಕೆಂಬುದನ್ನು ಯಾವುದೇ ಅಕ್ಕಸಾಲಿಗ ಹೇಳಿಯಾನು. ಆದರೆ ಏಕೆ ಬೇಕು? ಗೊಮ್ಮಟನ ಆ ಪ್ರಶಾಂತ ನಗೆಯ ಆಭರಣದ ಮುಂದೆ ಈ ಚಿನ್ನ, ವಜ್ರ ಎಲ್ಲವೂ ಕಸಕ್ಕೆ ಸಮ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ಕ್ಯಾಬರೆ ಡ್ಯಾನ್ಸ್‌ಗಳನ್ನು ಮಂದ ಬೆಳಕಿನಲ್ಲೇ ನಡೆಸುತ್ತಾರಲ್ಲಾ, ಏಕೆ?*



ಬೆಳಕು ಹೆಚ್ಚಿದ್ದರೆ ಒಬ್ಬರ ಮುಖ ಇನ್ನೊಬ್ಬರಿಗೆ ಕಂಡುಬಿಡುವುದಲ್ಲ! ತಪ್ಪುದಾರಿಗೆ ತಮವೇ ಉತ್ತಮ!

ಎಸ್.ಸಿ.ಇಂದಿರಾ, ಶಿವಮೊಗ್ಗ
*ರಾಜಕಾರಣಿಗಳೂ ಅಗ್ನಿಪ್ರವೇಶಕ್ಕೆ ಒಳಗಾಗಿ ಸಚ್ಚಾರಿತ್ರ್ಯವನ್ನು ಸಾಬೀತುಪಡಿಸಬಹುದಲ್ಲವೆ?*
ಕಿಚ್ಚನ್ನು ಕಿಚ್ಚಿನಿಂದ ಸುಡಲು ಸಾಧ್ಯವಿಲ್ಲ. ಇವರ ಹೊಟ್ಟೆಕಿಚ್ಚು, ಮತ್ಸರದ ಉರಿ, ವಿನಾಶಕ ಜ್ವಾಲೆಯ ಮುಂದೆ ಅಗ್ನಿ ಮಂಜು!

ಆರಿಫ್, ದಾವಣಗೆರೆ
*ಹುಡುಗಿಯರು ತಮ್ಮ ಮನಸ್ಸನ್ನು ಗಡಿಯಾರದ ಮುಳ್ಳಿನಂತೆ ನಿಮಿಷ ನಿಮಿಷಕ್ಕೂ ಬದಲಾಯಿಸುತ್ತಾರಲ್ಲಾ, ಏಕೆ?*
ಚಂಚಲತೆಯೇ ಕ್ಷಣಕ್ಷಣವೂ ವೀಕ್ಷಣಕ್ಕೆ ಲಕ್ಷಣ ಮೈ ಬಾಯ್!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಉಪ್ಪಿನಂಗಡಿಗೂ, ಕಲ್ಲಂಗಡಿಗೂ ಇರುವ ಬಾಂಧವ್ಯ ಅರ್ಥವಾಗುವುದಿಲ್ಲಣ್ಣ ಎಂದು ಹಲುಬುವವರಿಗೆ ನಿಮ್ಮ ಸಂದೇಶ?*
ಜೋರು ಮಳೆ ಬಂದರೆ ಎರಡೂ ಹಾಳು!

ಗೀತಾ ಬರ್ಲ, ಬೆಂಗಳೂರು
*ಹೆಣ್ಣುಮಕ್ಕಳ ಸಂಖ್ಯೆ ಕುಗ್ಗುತ್ತಿರುವುದನ್ನು ನೋಡಿದರೆ ಮುಂದೊಂದು ದಿನ ಗಂಡಸರ ಪ್ರಪಂಚವೇ ಇಲ್ಲಿ ರಾರಾಜಿಸುವಂತೆ ಕಾಣುತ್ತಿದೆಯಲ್ಲಾ?*
ಅಕಟಕಟಾ! ಆಗ ಟೆಸ್ಟ್ ಟ್ಯೂಬ್‌ಗಳನ್ನೇ ಮಮ್ಮಿ, ಗ್ರಾಂಡ್‌ಮಾ, ಆಂಟಿ ಎಂದೆಲ್ಲಾ ಕೂಗುವರೋ ಏನೋ....!

ಅಶೋಕ ಸಾಲ್ಯಾನ್, ಪಡುಬಿದ್ರಿ
*ಮನೆ ಅಳಿಯನನ್ನು ಕಡೆಗಣಿಸಿ ಮಗಳನ್ನು ಬೆಂಬಲಿಸುವ ಅತ್ತೆಯಂದಿರೂ ಇದ್ದಾರೆಯೇ?*
ಇರುವುದೇ ಆ ವಿಧದವರು; ವಿವಾಹವೇ ಸರಪಣಿ, ಮನೆಯೇ ಗೂಡು, ಮನೆಯಳಿಯ ಸಾಕುನಾಯಿ ಎಂಬುದೇ ನಿತ್ಯಸತ್ಯ!

ವಿ.ಹೇಮಂತಕುಮಾರ, ಬೆಂಗಳೂರು
*ಸಣ್ಣಕ್ಕಿ ಉಂಡರೂ ಸಣ್ಣಾಕಿ ಆಗಲಿಲ್ಲವಲ್ಲ ನನ್ನವಳು...?*
ಛೆ! ಯಾವ ಅಕ್ಕಿ ತುಂಬಿದರೇನು, ಡ್ರಮ್ಮು ಡ್ರಮ್ಮೇ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಹಣದ ಹುಚ್ಚು ಹಿಡಿದವರಿಗೆ ಆ ಹುಚ್ಚು ಬಿಡಿಸುವುದು ಹೇಗೆ?*
ಸಾಧ್ಯವಿಲ್ಲ ಬಿಡಿ. ಅದು ಕೆರೆದಷ್ಟೂ ಹೆಚ್ಚುವ ನವೆ.

ರಾಜೇಂದ್ರ ಹೆಗಡೆ, ಹಾವೇರಿ
*ನೀವು ಮೊದಲು ಮಣೆ ಹಾಕಿದ್ದು ಹೆಂಡತಿಗೋ, ಖಾದಿಗೋ, ಖಾಕಿಗೋ, ಕಾವಿಗೋ...?*
ಇವಿಷ್ಟಕ್ಕೂ ಅಲ್ಲ, ನನ್ನ ಪ್ರೈಮರಿ ಸ್ಕೂಲ್ ಕ್ಲಾಸ್‌ಮೇಟ್‌ಗಳಿಗೆ, ಮಿಸ್ ಆದೇಶದ ಮೇರೆಗೆ!

## ಬಹುಮಾನಿತ ಪ್ರಶ್ನೆ

ಎನ್.ವಿ.ಶ್ರೀನಿವಾಸ್, ಮೈಸೂರು
*ಸೊಳ್ಳೆಗಳಿಗೂ ಬದುಕುವ ಹಕ್ಕು ಇರುತ್ತದೆಯೆ?*
ಜನ್ಮಜನ್ಮಕ್ಕೂ ಇರುತ್ತದೆ. ಒಂದೊಮ್ಮೆ ಸತ್ತರೂ ತೆರಿಗೆ ಅಧಿಕಾರಿ, ಸರ್ಕಾರಿ ವೈದ್ಯ, ನರ್ಸ್, ಇತ್ಯಾದಿಯಾಗಿ ಮರುಜನ್ಮ ಪಡೆದು ಬದುಕುತ್ತದೆ!

ಗಾಯತ್ರಿ, ರಾಜಾಜಿನಗರ
*ಮೊಬೈಲ್, ಟಿವಿ, ವೆಹಿಕಲ್ ಇಲ್ಲ ಎಂದರೆ ಝೂನಲ್ಲಿರುವ ಪ್ರಾಣಿಗಳನ್ನು ನೋಡುವಂತೆ ವಿಚಿತ್ರವಾಗಿ ನೋಡುತ್ತಾರಲ್ಲಾ...?*
ಛೆ! ಮ್ಯೂಸಿಯಮ್‌ನಲ್ಲಿರುವ ಪುರಾತನ ವಸ್ತುವನ್ನು ನೋಡಿದಂತೆ ನೋಡಬೇಕೆಂಬುದು ಅವರಿಗೆ ತಿಳಿದಿಲ್ಲ!

ಉದಯಶಂಕರರಾವ್, ದೊಡ್ಡಬಳ್ಳಾಪುರ
*ಎಲ್ಲರಿಗೂ ಒಂದೇ ದೇವರು. ಆದರೆ, ಕೆಲವರೇಕೆ ಶ್ರೀಮಂತರು, ಹಲವರೇಕೆ ಬಡವರು?*
ಸೊನ್ನೆ ಕ್ಯಾಂಡಲ್ ಬಲ್ಬ್‌ನಲ್ಲೂ, 100 ಕ್ಯಾಂಡಲ್ ಬಲ್ಬ್‌ನಲ್ಲೂ ಹರಿಯುವುದು 230 ವೋಲ್ಟ್ ಕರೆಂಟೇ. ಅದರದರ ಯೋಗ್ಯತೆಯಂತೆ ಅದರದರ ಬೆಳಕು!

ಡ್ರೈರಿ ವಿಶ್ವನಾಥ್, ಬೆಂಗಳೂರು
*ಸ್ತ್ರೀಯನ್ನು ಯಾವಾಗ ಪ್ರಶಂಸಿಸಬೇಕು?*



ಕಂಡಾಗಲೆಲ್ಲ!

ಕೆ.ಮಲ್ಲೇಶ, ಕೊಡಸೋಗೆ
*ಗುಣಕ್ಕಿಂತ ಹಣಕ್ಕೆ ಹೆಚ್ಚು ಬೆಲೆ ಕೊಡುವವರು ಜಾಸ್ತಿಯಾಗುತ್ತಿರುವುದೇಕೆ?*
ಗುಣದ ಬೆಲೆ ತಿಳಿದವರು ಕಡಿಮೆಯಾಗುತ್ತಿರುವುದೇ ಏಕೈಕ ಕಾರಣ.

ಮಂಜುನಾಥ ಜಿ. ಹಗರಿಬೊಮ್ಮನಹಳ್ಳಿ
*ಕಂಪ್ಯೂಟರ್ ಪರದೆಯಲ್ಲಿರುವ ಗಣಪನಿಗೆ ಹಾಲಿನ ಅಭಿಷೇಕ ಮಾಡಬಹುದಾ...?*
ಗುಡ್ ಐಡಿಯಾ! ಮಾಡಿ. ಗಣೇಶನಿಗೆ ಕ್ಷೀರ, ನಿಮಗೆ ಹೈ ಕ್ಲಾಸ್ ಕ್ಷೌರ!

■ ರಾಮ್